**Publication : Kannada Prabha** **Date : Saturday, 19th Jan, 2013**
**Edition : Bangalore**

# ಆಟೋಲೈಫ್ ವಿಮಾ ಯೋಜನೆಗೆ ಚಾಲನೆ

ಬೆಂಗಳೂರು: ಇಂಡಿಯಾ ಫಸ್ಟ್ ಲೈಫ್ ಇನ್ಶೂರೆನ್ಸ್ ತನ್ನ 2ನೇ ಹಂತದ ಸಾಮಾಜಿಕ ಜವಾಬ್ದಾರಿಯ ಉಪಕ್ರಮ ಆಟೋಲೈಫ್‌ಗೆ ಶುಕ್ರವಾರ ಚಾಲನೆ ನೀಡಿದೆ. ಆಟೋಲೈಫ್ ಸಮಾನ ಮನಸ್ಕರ ವೇದಿಕೆಯಾಗಿದ್ದು, ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುತ್ತದೆ. ಜವಾಬ್ದಾರಿಯುತ ಚಾಲನೆಗೆ ಮಹತ್ವ ನೀಡುತ್ತದೆ. ಆಟೋಮೊಬೈಲ್ ಆಸಕ್ತರಿಗೆ ಮಾತ್ರವಲ್ಲದೆ, ಎಲ್ಲರಿಗೂ ಸುರಕ್ಷಿತ ಚಾಲನೆ ಬಗ್ಗೆ ಮಾರ್ಗದರ್ಶನ ನೀಡುತ್ತದೆ ಎಂದು ಇಂಡಿಯಾ ಫಸ್ಟ್ ಲೈಫ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಡಾ.ಪಿ. ನಂದಗೋಪಾಲ್ ತಿಳಿಸಿದರು. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ 2011ರ ಅಂಕಿ– ಅಂಶಗಳ ಪ್ರಕಾರ, ಅಪಘಾತಗಳಿಂದ ಸಂಭವಿಸುವ ಸಾವುಗಳ ಸಂಖ್ಯೆಯಲ್ಲಿ ಶೇ.2.2ರಷ್ಟು ಏರಿಕೆಯಾಗಿದೆ. ಇಂದಿನ ಒತ್ತಡ ಜೀವನದಲ್ಲಿ ವಾಹನ ಚಾಲಕರು ತಾಳ್ಮೆ ಕಳೆದುಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಆದರೆ ಜೀವ ಅಮೂಲ್ಯ. ಜಾಗರೂಕತೆಯ ಚಾಲನೆಯ ಅಗತ್ಯವಿದೆ ಎಂದರು. ಕಾರ್ಯಕ್ರಮದಲ್ಲಿ ಎಫ್‌ಎಡಿಎ ಅಧ್ಯಕ್ಷ ಮೋಹನ್ ಮತ್ತು ಎಫ್‌ಡಿಎ ಉಪಾಧ್ಯಕ್ಷ ಕೆ.ವಿ.ಎಸ್. ಪ್ರಕಾಶ್‌ರಾವ್ ಭಾಗವಹಿಸಿದ್ದರು.

A Joint Venture of